ಕರ್ನಾಟಕ ಸರ್ಕಾರ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು -1

ಸಂಖ್ಯೆ : ಇ-ಆಡಳಿತ-ಶಿಕ್ಷಣವಾಹಿನಿ-2 ಬಳಕೆ – 1/2011-12 ದಿನಾಂಕ : 25.11.2011

**ಜ್ಞಾಪನ**

**ವಿಷಯ : ಶಿಕ್ಷಣವಾಹಿನಿ ವರ್ಷನ್-2 ತಂತ್ರಾಂಶವನ್ನು ಸ್ಟೇಟ್ ಡೇಟಾ ಸೆಂಟರ್ ನಲ್ಲಿ ಅಳವಡಿಸಿ ಅದರಲ್ಲಿ ಶಿಕ್ಷಣವಾಹಿನಿ ತಂತ್ರಾಂಶ ವರ್ಷನ್-1 ರ ಡೇಟಾಬೇಸ್ ನ್ನು ಸಂಪೂರ್ಣವಾಗಿ ವರ್ಗಾಯಿಸುತ್ತಿರುವ ಬಗ್ಗೆ.**

ಮೇಲ್ಕಾಣಿಸಿದ ವಿಷಯದನ್ವಯ, ಕಳೆದ 4 ವರ್ಷಗಳಿಗಿಂತ ಮೇಲ್ಪಟ್ಟು ಲೆಸ್ ಪೇಪರ್ ಆಫೀಸ್ ( ಶಿಕ್ಷಣವಾಹಿನಿ ವರ್ಷನ್-1) ತಂತ್ರಾಂಶವನ್ನು ರಾಜ್ಯದ ಎಲ್ಲಾ ಕೇಂದ್ರ ಕಛೇರಿಗಳು, ಸಹ ನಿರ್ದೇಶಕರ ಕಛೇರಿ, ಉಪ-ನಿರ್ದೇಶಕರ ಕಛೇರಿ ಹಾಗೂ ಆಯ್ದ ಕೆಲವು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಅನುಷ್ಠಾನಗೊಳಿಸಿ ಈ ತಂತ್ರಾಂಶವನ್ನು ಕಡತ ಹಾಗೂ ಪತ್ರಗಳ ವಿವರಗಳನ್ನು ನಮೂದಿಸಲು ಬಳಸಲಾಗುತ್ತಿದೆ. ಈಗ ಈ ತಂತ್ರಾಂಶದಲ್ಲಿ ಇನ್ನಷ್ಟು ಸುಧಾರಿತ ಅಂಶಗಳನ್ನು ಅಳವಡಿಸಿ ಸದರಿ ತಂತ್ರಾಂಶದ ಮಾದರಿಯಲ್ಲೇ ಹೊಸದಾದ ತಂತ್ರಾಂಶವನ್ನು (ಅಂದರೆ ಶಿಕ್ಷಣವಾಹಿನಿ ವರ್ಷನ್ -2) ನ್ನು ಅಭಿವೃದ್ದಿಗೊಳಿಸಲಾಗಿದೆ. ಈ ಹೊಸ ತಂತ್ರಾಂಶದಲ್ಲಿ ಈಗಾಗಲೇ ಎಂಟ್ರಿ ಮಾಡಿರುವ ಪತ್ರ ಹಾಗೂ ಕಡತಗಳ ವಿವರಗಳನ್ನು ವರ್ಗಾವಣೆ ಮಾಡುವ ಕಾರ್ಯವನ್ನು ದಿನಾಂಕ 26.11.2011 ರಂದು ಹಮ್ಮಿಕೊಂಡಿದ್ದು ಸದರಿ ದಿನಾಂಕದಂದು ಶಿಕ್ಷಣವಾಹಿನಿ ವರ್ಷನ್ -2 ರ ತಂತ್ರಾಂಶದ ಅಳವಡಿಕೆ ಹಾಗೂ ಪೋರ್ಟಿಂಗ್ ಕಾರ್ಯವನ್ನು ಕೈಗೊಳ್ಳಲಾಗುವುದು. **ಆದ್ದರಿಂದ ದಿನಾಂಕ 26.11.2011 ರಂದು ಬೆಳಗ್ಗೆ 10 ರಿಂದ ಸಂಜೆ 6 ರ ವರೆವಿಗೂ ಶಿಕ್ಷಣವಾಹಿನಿ ವರ್ಷನ್-1 ಅಥವಾ ಶಿಕ್ಷಣವಾಹಿನಿ ವರ್ಷನ್-2 ಲಭ್ಯವಿರುವುದಿಲ್ಲ.**

ದಿನಾಂಕ 28.11.2011 ರಿಂದ ಶಿಕ್ಷಣವಾಹಿನಿ-1 ರ ಬದಲಾಗಿ ಶಿಕ್ಷಣವಾಹಿನಿ ವರ್ಷನ್-2 ಕಾರ್ಯರೂಪಕ್ಕೆ ಬರುತ್ತದೆ. ಸದರಿ ತಂತ್ರಾಂಶದ ಬಳಕೆ ಬಗ್ಗೆ ದಿನಾಂಕ 18.11.2011 ರಿಂದ ದಿನಾಂಕ 26.11.2011 ರ ವರೆಗೆ ತರಭೇತಿ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಂಡಿದ್ದು ರಾಜ್ಯದ ವಿವಿದ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ/ಅಧಿಕಾರಿ ವೃಂದದವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಗುರುತಿಸಿ ಇವರುಗಳ ಪೈಕಿ 94 ಜನರಿಗೆ ತರಭೇತಿಯನ್ನು ಈಗಾಗಲೇ ನೀಡಲಾಗಿದೆ. ಈ ಸಂಪನ್ಮೂಲ ವ್ಯಕ್ತಿಗಳಿಂದ ಆಯುಕ್ತಾಲಯಗಳ ಎಲ್ಲಾ ಕೇಂದ್ರ ಕಛೇರಿಗಳು, ಸಹ-ನಿರ್ದೇಶಕರ ಕಛೇರಿ, ಉಪ-ನಿರ್ದೇಶಕರ ಕಛೇರಿ, ಹಾಗೂ ಬಿ.ಇ.ಓ ಕಛೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ತರಭೇತಿ ಪಡೆದು ದಿನಾಂಕ 28.11.2011 ರಿಂದ ಶಿಕ್ಷಣವಾಹಿನಿ ವರ್ಷನ್-2 ನ್ನು ಬಳಸಬಹುದು.

ಇದಲ್ಲದೆ, ಶಿಕ್ಷಣವಾಹಿನಿ ವರ್ಷನ್-2 ನ್ನು ಬಳಸಲು ಸ್ವಯಂ ಕಲಿಕೆಗೆ ಅನುಕೂಲವಾಗುವಂತೆ ವಿಡಿಯೋ ಟ್ಯೂಟೋರಿಯಲ್ ಗಳ ಸರಣಿಯನ್ನು ಸದ್ಯದಲ್ಲೇ ಇಲಾಖಾ ವೆಬ್ ಸೈಟ್ ನಲ್ಲಿ ಅಳವಡಿಸಲಾಗುವುದು. ಈ ಟ್ಯೂಟೋರಿಯಲ್ಸ್‌ಗಳ ಸರಣಿಯನ್ನು ಬಳಸಿಕ್ಕೊಂಡು ಕಛೇರಿ ಸಿಬ್ಬಂದಿ ಮತ್ತು ಅಧಿಕಾರಿ ವೃಂದದವರು ಶಿಕ್ಷಣವಾಹಿನಿ ವರ್ಷನ್-2 ತಂತ್ರಾಂಶದ ಬಳಕೆಯ ಬಗ್ಗೆ ಸ್ಥಳದಲ್ಲೇ ಮಾಹಿತಿ ಪಡೆದು ಸದರಿ ತಂತ್ರಾಂಶವನ್ನು ಸುಲಬವಾಗಿ ಬಳಸಬಹುದು.

ದಿನಾಂಕ 28.11.2011 ರಿಂದ ಶಿಕ್ಷಣವಾಹಿನಿ ವರ್ಷನ್-2 ನ್ನು KSWAN ಅಥವಾ INTERNET ರ ಮೂಲಕ ACCESS ಮಾಡಬಹುದು. ಶಿಕ್ಷಣವಾಹಿನಿ ವರ್ಷನ್-2 ನ್ನು ACCESS ಮಾಡಲು ಈ ಕೆಳಕಾಣಿಸಿರುವ ವೆಬ್ ಸೈಟ್ ವಿಳಾಸವನ್ನು ಉಪಯೋಗಿಸಬಹುದಾಗಿದೆ.

ಶಿಕ್ಷಣವಾಹಿನಿ ವರ್ಷನ್-2 ರ ದಿನನಿತ್ಯದ ಬಳಕೆಗಾಗಿ ACCESS_ಮಾಡಲು ಬಳಸಬೇಕಾದ ವೆಬ್ ಸೈಟ್ ವಿಳಾಸ

KSWAN web address : http://10.10.20.90/evahini

INTERNET web address : http://202.138.101.21/evahini

ಶಿಕ್ಷಣವಾಹಿನಿ ವರ್ಷನ್-2 ರ ತರಭೇತಿಗಾಗಿ ACCESS ಮಾಡಲು ಬಳಸಬೇಕಾದ ವೆಬ್ ಸೈಟ್ ವಿಳಾಸ

KSWAN web address : http://10.10.20.90/svtraining

INTERNET web address: http://202.138.101.21/svtraining

"ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಆದೇಶದ ಮೇರೆಗೆ"

for P.H. Kowlgi
ನಿರ್ದೇಶಕರು ( ಕಾರ್ಯಕ್ರಮ ಹಾಗೂ ಇ-ಆಡಳಿತ ಮುಖ್ಯಸ್ಥರು)